# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 26 |
| ಸದಸ್ಯರ ಹೆಸರು | : | ಶ್ರೀ ಯು.ಬಿ. ವೆಂಕಟೇಶ್<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 12-09-2022 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ<br>ಮತ್ತು ಸಂಸ್ಕೃತಿ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು ನಗರದ ಪಾದಾಚಾರಿ ಮಾರ್ಗಗಳಲ್ಲಿರುವ ಹಳೆಯ ಟ್ರಾನ್ಸ್‌ಫಾರ್ಮರ್‌ಗಳ ಸಂಖ್ಯೆ ಎಷ್ಟು; ಇವುಗಳಿಂದ ಸಾರ್ವಜನಿಕರಿಗೆ ತೊಂದರೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೆಂಗಳೂರು ನಗರ ವ್ಯಾಪ್ತಿಯಲ್ಲಿನ ಪಾದಚಾರಿ ಮಾರ್ಗಗಳಲ್ಲಿರುವ ಒಟ್ಟು 5784 ಪರಿವರ್ತಕಗಳಿಂದ ಪಾದಚಾರಿಗಳಿಗೆ ಅಡಚಣೆಯಾಗುತ್ತಿರುವುದನ್ನು ಗುರುತಿಸಲಾಗಿರುತ್ತದೆ.<br>ಪಾದಚಾರಿ-ಮಾರ್ಗಗಳಲ್ಲಿನ ಪರಿವರ್ತಕಗಳನ್ನು ಅನುಕೂಲಕರವಾಗಿರುವ ಪರ್ಯಾಯ ಸ್ಥಾನಗಳಿಗೆ ಸ್ಥಳಾಂತರಿಸುವುದು ಹಾಗೂ ಸ್ಥಳಾಂತರಿಸಲು ಸಾಧ್ಯವಾಗದ ಪರಿವರ್ತಕ ಕೇಂದ್ರಗಳನ್ನು ಹೊಸ ವಿನ್ಯಾಸಕ್ಕೆ ಬದಲಾಯಿಸಲಾಗುತ್ತಿದೆ. |
| (ಆ) | ಬಂದಿದ್ದಲ್ಲಿ, ಇವುಗಳ ಬದಲಾವಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಪಾದಚಾರಿ ಪರಿವರ್ತಕ ಕೇಂದ್ರಗಳನ್ನು ಹೊಸ ವಿನ್ಯಾಸಕ್ಕೆ ಬದಲಾಯಿಸುವ ಹಂತ-1 ರ ಕಾಮಗಾರಿಗಳನ್ನು ಸೆಪ್ಟಂಬರ್-2017 ರಲ್ಲಿ ಕೈಗೆತ್ತಿಕೊಂಡಿದ್ದು 3194 ಪಾದಚಾರಿ ಮಾರ್ಗದಲ್ಲಿರುವ ಪರಿವರ್ತಕ ಕೇಂದ್ರಗಳನ್ನು ಹೊಸ ವಿನ್ಯಾಸಕ್ಕೆ ಪರಿವರ್ತಿಸಿ ಹಾಗೂ 02 ಸಂಖ್ಯೆ ಪರಿವರ್ತಕ ಕೇಂದ್ರಗಳನ್ನು(ಒಟ್ಟು 3196 ) ಪಾದಚಾರಿ ಮಾರ್ಗದಿಂದ ಸ್ಥಳಾಂತರಿಸಿ ಪಾದಚಾರಿಗಳಿಗೆ ಸಂಚರಿಸಲು ಅನುಕೂಲವಾಗುವಂತೆ ಮಾಡಲಾಗಿದೆ. ಹಂತ-1 ರ ಕಾಮಗಾರಿಗಳು ಸೆಪ್ಟಂಬರ್-2019ಕ್ಕೆ ಮುಕ್ತಾಯಗೊಂಡಿರುತ್ತದೆ.<br>ಮುಂದುವರೆದು, ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಪಾದಚಾರಿ ಪರಿವರ್ತಕ ಕೇಂದ್ರಗಳ ಪುನರ್ ಸರ್ವೇ ಮಾಡಿ ಬಾಕಿ ಇರುವ 2588 ಪರಿವರ್ತಕ ಕೇಂದ್ರಗಳನ್ನು ಹಂತ-2 ರ ಕಾಮಗಾರಿಯಡಿಯಲ್ಲಿ ಕೈಗೆತ್ತಿಕೊಂಡು, ಮಾರ್ಚ್-2022 ರಲ್ಲಿ ಕಾರ್ಯಾದೇಶ ನೀಡಲಾಗಿರುತ್ತದೆ. ಹಂತ-2 ರ ಅಡಿಯಲ್ಲಿ ಆಗಸ್ಟ್-2022 ರ ಅಂತ್ಯಕ್ಕೆ 1155 ಪಾದಚಾರಿ ಪರಿವರ್ತಕ ಕೇಂದ್ರಗಳನ್ನು ಹೊಸ ವಿನ್ಯಾಸಕ್ಕೆ ಬದಲಾಯಿಸಿ ಪಾದಚಾರಿಗಳಿಗೆ ಅನುಕೂಲವಾಗುವಂತೆ ಮಾಡಲಾಗಿದೆ. ಬಾಕಿ ಉಳಿದ 1433 ಪಾದಚಾರಿ ಪರಿವರ್ತಕ ಕೇಂದ್ರಗಳ ಕಾಮಗಾರಿಯನ್ನು ಸೆಪ್ಟಂಬರ್-2023 ರೊಳಗೆ ಪೂರ್ಣಗೊಳಿಸಲು ಬೆವಿಕಂ ವತಿಯಿಂದ ಕ್ರಮ ಕೈಗೊಳ್ಳಲಾಗಿದೆ. |

| | | |
|---|---|---|
| (ಇ) | ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಟ್ರಾನ್ಸ್‌ಫಾರ್ಮರ್‌ಗಳಿಂದ ಹಾನಿಗೊಳಗಾದವರ ಸಂಖ್ಯೆ ಎಷ್ಟು; ಇವರುಗಳಿಗೆ ನೀಡಿರುವ ಪರಿಹಾರದ ಮೊತ್ತವೆಷ್ಟು? (ಜಿಲ್ಲಾವಾರು, ತಾಲ್ಲೂಕುವಾರು ವ್ಯಕ್ತಿವಾರು ಮಾಹಿತಿಯನ್ನು ಒದಗಿಸುವುದು) | ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಟ್ರಾನ್ಸ್‌ಫಾರ್ಮರ್‌ಗಳಿಂದ ಹಾನಿಗೊಳಗಾದವರಿಗೆ ನೀಡಿರುವ ಪರಿಹಾರದ ಮೊತ್ತದ ಜಿಲ್ಲಾವಾರು ವಿವರಗಳನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |

ಸಂಖ್ಯೆ: ಎನರ್ಜಿ 191 ಇಬಿಎಸ್ 2022

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಯು.ಬಿ. ವೆಂಕಟೇಶ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 26 ಕ್ಕೆ ಅನುಬಂಧ

ಕಳೆದ ಮೂರು ವರ್ಷಗಳಿಂದ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಟ್ರಾನ್ಸ್ ಫಾರ್ಮರ್ ಗಳಿಂದ ಹಾನಿಗೊಳಗಾದವರ ಜಿಲ್ಲಾವಾರು ವಿವರಗಳು:-

| ಕ್ರ. ಸಂ | ಜಿಲ್ಲೆ | ತಾಲ್ಲೂಕು | ಅಪಘಾತಕ್ಕೊಳಗಾದ ವ್ಯಕ್ತಿಯ ವಿವರ | ದಿನಾಂಕ | ಮಾರಣಾಂತಿಕ/ ಮಾರಣಾಂತಿಕವಲ್ಲದ | ಪರಿಹಾರ ನೀಡಿದ ಮೊತ್ತ ಲಕ್ಷ ರೂ ಗಳಲ್ಲಿ | ಷರಾ |
|---|---|---|---|---|---|---|---|
| **2019-20** | | | | | | | |
| 1 | ಬೆಂಗಳೂರು ಗ್ರಾಮಾಂತರ | ನೆಲಮಂಗಲ | ಕುಮಾರಿ: ಶರಣ್ಯ | 18.05.2019 | ಮಾರಣಾಂತಿಕ | 5.00 | ಕುಮಾರಿ:ಶರಣ್ಯ ದಾರಿಯಲ್ಲಿ ಹೋಗುವಾಗ ಟ್ರಾನ್ಸ್ ಫಾರ್ಮರ್ ಸ್ವಿಚ್ ಮುಟ್ಟಿದಾಗ ಈ ಅಪಘಾತ ಸಂಭವಿಸಿರುತ್ತದೆ. |
| 2 | ದಾವಣಗೆರೆ | ದಾವಣಗೆರೆ | ಮಾಸ್ಟರ್: ಶಾಯಿದ್ | 27.09.2019 | ಮಾರಣಾಂತಿಕ | 5.00 | ಮಾಸ್ಟರ್: ಶಾಯಿದ್ ರವರು ಆಟವಾಡುತ್ತಾ ಟ್ರಾನ್ಸ್ ಫಾರ್ಮರ್ ವಿತರಣಾ ಪೆಟ್ಟಿಗೆ (Distribution box ) ಯಲ್ಲಿ ಕೈ ಹಾಕಿದಾಗ ವಿದ್ಯುತ್ ಅಪಘಾತ ಸಂಭವಿಸಿರುತ್ತದೆ. |
| **2020-21** | | | | | | | |
| 3 | ಕೊಪ್ಪಳ | ಗಂಗಾವತಿ | ಶ್ರೀಮತಿ ಮಾಣಿಕಮ್ಮ, ಗಂಡ ಮುಸಲಯ್ಯ ಸಾ: ಮಜ್ಜಿಗಿ ಕ್ಯಾಂಪ್ | 11.05.2020 | ಮಾರಣಾಂತಿಕ | ಮರಣೋತ್ತರ ಪರೀಕ್ಷೆಯ ವರದಿ ಮತ್ತು FIR ವರದಿ ಬಂದಿರುವುದಿಲ್ಲ | ಎಫ್-14 ಮುಸ್ಟೂರು ಐಪಿ ಫೀಡರ್‌ನ ವಿದ್ಯುತ್ ಪರಿವರ್ತಕದ ಅರ್ಥಿಂಗ್ ವೈರ್ ಕಟ್ಟಾಗಿದ್ದರ ಕಾರಣ ಪರಿವರ್ತಕವು ಗ್ರೌಂಡ್ ಆಗಿ ವಿದ್ಯುತ್ ಸ್ಪರ್ಶದಿಂದ ಮೃತಪಟ್ಟಿರುತ್ತಾರೆ |
| 4 | ರಾಯಚೂರು | ರಾಯಚೂರು | ಶ್ರೀನಿವಾಸ ತಂದೆ ರೆಡ್ಡಿ ನಾಯಕ್ ಸಾ: ಚಂದ್ರಬಂಡಾ | 04.03.2021 | ಮಾರಣಾಂತಿಕವಲ್ಲದ | ಗು.ವಿ.ಸ.ಕಂಪನಿಯ ತಪ್ಪಿಲ್ಲದ ಕಾರಣ ಪರಿಹಾರ ನೀಡಿರುವುದಿಲ್ಲ | ಜೆಸ್ಕಾಂ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗಕ್ಕೆ ತಿಳಿಸದೇ ಅನಧಿಕೃತವಾಗಿ 100 KVA ಪರಿವರ್ತಕದ ಹೆಚ್.ಟಿ ಫ್ಯೂಸ್ ಹಾಕಲು ಹೋಗಿ ವಿದ್ಯುತ್ ಸ್ಪರ್ಶಗೊಂಡು ವಿದ್ಯುತ್ ಅಪಘಾತವಾಗಿರುತ್ತದೆ. |

| 2021-22 | | | | | | | |
|---|---|---|---|---|---|---|---|
| 5 | ಬೆಂಗಳೂರು | ಕೆಂಗೇರಿ | ಶ್ರೀ. ಶಿವರಾಜ್ ಹಾಗೂ ಕುಮಾರಿ: ಚೈತನ್ಯ | 23.03.2022 | ಮಾರಣಾಂತಿಕ | 20.00 | ಆಂತರಿಕ ದೋಷದಿಂದ ಪರಿವರ್ತಕದಲ್ಲಿರುವ ತೈಲವು ತಾಪಮಾನ ಹೆಚ್ಚಿಸಿಕೊಂಡಿರುವ ಕಾರಣ ಪರಿರ್ವತಕದಲ್ಲಿ ಒತ್ತಡ ಉಂಟಾಗಿ ತೈಲವು ಹೊರಚಿಮ್ಮಿ ಈ ಅಪಘಾತ ಸಂಭವಿಸಿರುತ್ತದೆ. |
| 6 | ಬೀದರ್ | ಭಾಲ್ಕಿ | ಶ್ರೀ ಜಗನಾಥ ತಂದೆ ವಿಶ್ವನಾಥ್ (ಮಾರೂರ್) | 31.05.2021 | ಮಾರಣಾಂತಿಕ | ಗು.ವಿ.ಸ.ಕಂಪನಿಯ ತಪ್ಪಿಲ್ಲದ ಕಾರಣ ಪರಿಹಾರ ನೀಡಿರುವುದಿಲ್ಲ | ಮಹಾದೇವ ಮಂದಿರ ಹತ್ತಿರ ಇರುವ 25 KVA ಪರಿವರ್ತಕದ ಹತ್ತಿರ ಹೋಗಿ ಜೆಸ್ಕಾಂ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗಕ್ಕೆ ತಿಳಿಸದೇ ಅನಧಿಕೃತವಾಗಿ ಕೆಲಸಮಾಡುವಾಗ ಅದರ ನೇರ ಸಂಪರ್ಕಕ್ಕೆ ಬಂದು ವಿದ್ಯುತ್ ಹರಿದು ಅವಘಡ ಸಂಭವಿಸಿರಬಹುದು |
| 7 | ಯಾದಗೀರ | ಶೋರಾಪೂರ | ಶ್ರೀ ವಿನಾಯಕ ಸೋಮಲಸಿಂಗ ಚಬಾಣ್ (ಮು: ದೇವಪುರ್) | 15.03.2022 | ಮಾರಣಾಂತಿಕ | ಪಂಚನಾಮ ವರದಿ ಮತ್ತು FIR ವರದಿ ಬಂದಿರುವುದಿಲ್ಲ | ಪರಿವರ್ತಕದ LT Protection Kit ನ ಸಂಪರ್ಕಕ್ಕೆ ಬಂದಾಗ ಅವಘಡ ಸಂಭವಿಸಿರಬಹುದು |
| 8 | ವಿಜಯನಗರ | ಹಡಗಲಿ | ಶ್ರೀ ಕಿರಣ್ ತಂದೆ ರಾಮಕೃಷ್ಣ (ಕಾಗನೂರ್) | 21.07.2021 | ಮಾರಣಾಂತಿಕ | ವಿದ್ಯುತ್ ಪರಿವೀಕ್ಷಕರ ವರದಿ ಬಂದಿರುವುದಿಲ್ಲ | ಟ್ರಾನ್ಸ್ ಫಾರ್ಮರ್ ಅರ್ಥಿಂಗ್ ಲೀಕೇಜ್‌ನಿಂದಾಗಿ ಮೃತರಾಗಿರಬಹುದು. |
| 2022-23 (ಜೂನ್ ಅಂತ್ಯಕ್ಕೆ) – ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ. | | | | | | | |